MATTER UNDER RULE 312

re: Regularisations of Services of temporary workers on daily wages in State Library Department.

† ಕು: ಎಸ್. ಪ್ರಭಾಳಿ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಈ ಗ್ರಂಥಾಲಯ ಪ್ರಕರಣ ಹಲವಾರು ಭಾರಿ ಈ ಸದನದ ಮುಂದೆ ಬಂದಿದ್ದು ಪುನಃ ಇಂದು ಕೂಡ ಬಂದಿದೆ. ಅಲ್ಲಿರತಕ್ಕ ದಿನಗೂಲಿ ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂದು ಹಿಂದೆ ಇದೇ ಸದನದಲ್ಲಿ ಮಾನ್ಯ ಸುಬ್ಬಯ್ಯಶೆಟ್ಟರು ಆಶ್ವಾಸನೆ ಕೊಟ್ಟಿದ್ದರು. ಆದರೂ ಕೂಡ ಈಲಾಗಾಯ್ತು ಆ ೫೦ ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳಲಿಲ್ಲ. ಅವರು ಕಳೆದ ೧೧ ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರಾದರೂ ಅವರಿಗೆ ಕೆಲಸ ಸಿಗಲಿಲ್ಲ. ಅವರು ಈಗ ವಯೋಮಿತಿಯನ್ನು ಕೂಡ ದಾಟಿದ್ದಾರೆ. ಆದರಿಂದ ಅವರಿಗೆ ಬೇರೆ ಕಡೆ ಹೋಗುವುದಕ್ಕೂ ಅವಕಾಶವಿಲ್ಲವಾಗಿದೆ. ಇವತ್ತಿನ ದಿವಸ ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿರುವುದರಿಂದ ಅವರನ್ನು ಕೇಳುತ್ತೇನೆ. ಅಲ್ಲಿ ಕೇವಲ ಎರಡೇ ಕಾರಣಗಳಿಂದ ಅವರನ್ನು ಕೆಲಸದಿಂದ ತೆಗೆದಿದ್ದಾರೆ. ಅದೇನೆಂದರೆ, ಅವರು ಲಿಂಗಾಯಿತರು, ಬ್ರಾಹ್ಮಣರು ಎಂದು ತೆಗೆದಿದ್ದಾರೆ, ಆಂದಾಗ ಮೇಲ್ಜಾತಿಯಲ್ಲಿ ಹುಟ್ಟುವುದು ತಪ್ಪೇ ಎಂದು ಕೇಳುತ್ತೇನೆ. ಯಾರೂ ಜಾತಿಯನ್ನು ಕೇಳಿಕೊಂಡು ಹುಟ್ಟಿ ಬರುವುದಿಲ್ಲ. ಏನೋ ಬಂದು ಕೇಸಕ್ಕೋಸ್ಕರ ಬರುತ್ತಾರೆ. ಅಲ್ಲಿದ್ದ ೫೦ ಮಂದಿ ಕಳೆದ ೧೧ ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದರೂ ಕೂಡ ಅವರನ್ನು ರೆಕ್ರೂಟ್ ಮಾಡಿಕೊಂಡಿಲ್ಲ. ಹೀಗಾಗಿ ಅವರಿಗೆ ಬಹಳ ಅನ್ಯಾಯವಾಗಿದೆ, ಮಾತ್ರವಲ್ಲ ಅನಾನುಕೂಲವಾಗಿದೆ.

ಇನ್ನು ಅಲ್ಲಿ ಮುಖ್ಯ ಲೈಬ್ರರಿಯನ್ ಯಾರಿದ್ದಾರೆ ಅವರ ಬಗ್ಗೆ ವಿಜಿಲೆನ್ಸ್ ಕಮೀಷನ್‌ನಿಂದ ವಿಚಾರಣೆಯಾಗಿದೆ ಮತ್ತು ಸನ್ಮಾದಲ್ಲಿ ಅದರ ವರದಿ ಬರುತ್ತದೆಂದೂ, ಹಾಗೂ ಸದರಿ ವಿಚಾರವನ್ನು ಸಿ.ಐ.ಡಿ. ಗೆ ಕೂಡ ರೆಫರ್ ಮಾಡಿದ್ದೇವೆ ಮತ್ತು ಅದರ ವರದಿ ಕೂಡ ಬರುತ್ತದೆಂದೂ ಹಾಗೂ ಆ ವರದಿಗಳು ಬಂದ ಮೇಲೆ ತಿಳಿಸುತ್ತೇವೆಂದು ಇದೇ ಸದನದಲ್ಲಿ ಹಿಂದೆ ಮಾನ್ಯ ಯಾಜ್ಯಾರವರು ಹೇಳಿದ್ದರು. ಆದರೆ ಈ ಲಾಗಾಯ್ತು ತಿಳಿಸಲಿಲ್ಲ. ಆ ವರದಿಗಳು ಬಂದಿವೆಯಾ? ಹಿಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದು ತಿಳಿಯಲಿಲ್ಲ. ಮುಖ್ಯ ಲೈಬ್ರರಿಯನ್ ಅನ್ನು ಅಲ್ಲಿ ಉಳಿಸಿಕೊಂಡಿರುವುದರಿಂದ ಪರಿಣಾಮ ಏನಾಗಿದೆ ಎಂದರೆ ಅಲ್ಲಿನ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಮನೆಗೆ ಕಳುಹಿಸಿಕೊಡುವುದಕ್ಕೆ ಅವಕಾಶವಾಗಿದೆ. ಅವರಲ್ಲಿ ಕೆಲವರು ಮನೆಗೆ ಹೋಗಿ ಪ್ರಾಣ ತೆಗೆದುಕೊಳ್ಳುವ ಪರಿಸ್ಥಿತಿ ಕೂಡ ಬಂದಿದೆ ಅವರಲ್ಲಿ ಮನೆ ತುಂಬ ಮಕ್ಕಳು ಮರಿ ಉಳ್ಳವರು ಇದ್ದಾರೆ. ಈ ಸಂದರ್ಭದಲ್ಲಿ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ರೆಕ್ರೂಟ್ ಮಾಡಿಕೊಳ್ಳುವ ಸಮಯದಲ್ಲಿ ಎಂತೆಂತಹ ಸರ್ಟಿಫಿಕೇಟುಗಳನ್ನು ಒದಗಿಸಿ ಕೊಟ್ಟಿದ್ದಾರೆಂದರೆ, ಕೃಷ್ಣಪ್ಪ ಎಂಬ ಆಪೆಂಡರ್ ಸರ್ಕಾರಿ ಬಾಲಕರ ಪ್ರಾಥಮಿಕ ಶಾಲೆಯ ಗ್ರಂಥಾಲಯದಲ್ಲಿ ಕೆಲಸ ಮಾಡುತ್ತಿದ್ದ ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆದರೆ ಸರ್ಕಾರಿ ಬಾಲಕರ ಪ್ರಾಥಮಿಕ ಶಾಲೆಯಲ್ಲಿ ಯಾವ ಗ್ರಂಥಾಲಯವೂ ಇಲ್ಲ. ಹೀಗೆ ಅಂಥ ಅಭ್ಯರ್ಥಿಗಳಿಗೂ ಕೂಡ ಅಲ್ಲಿ ಕೆಲಸ ಕೊಟ್ಟಿದ್ದಾರೆ. ಅಲ್ಲಿ ಕೇವಲ ೩೫೩ ಗ್ರಂಥಾಲಯದ ಸಹಾಯಕರು ಎಂದು ಪ್ರಕಟ ಮಾಡಿದ್ದು ೩೭೦ ಜನರನ್ನು ಆಯ್ಕೆ ಮಾಡಿದ್ದಾರೆ. ಹೀಗೆ ಕರೆದದ್ದು ಒಂದು ಆಯ್ಕೆ ಮಾಡಿದ್ದು ಮತ್ತೊಂದು ಆಗಿದೆ. ಒಟ್ಟಿನಲ್ಲಿ, ಹಾಲಿ ಕೆಲಸ ಕಳೆದುಕೊಂಡಿರುವ ೫೦ ಮಂದಿಗೆ ಕೆಲಸ ಕೊಟ್ಟು ಅವರ ಉದ್ಧಾರಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಅಧ್ಯಕ್ಷರೇ, ಈ ವಿಚಾರ ಹಿಂದೊಮ್ಮೆ ಇದೇ ಸದನದಲ್ಲಿ ಚರ್ಚೆಯಾಗಿದ್ದು ಪುನಃ ಇವತ್ತು ಬಂದಿದೆ. ಸದರಿ ವಿಚಾರದ ಬಗ್ಗೆ ಹಿಂದೆ ಸರ್ಕಾರದವರು ಆಶ್ವಾಸನೆ ಕೊಟ್ಟಿದ್ದರೂ ಕೂಡ ಇವತ್ತಿನವರೆಗೆ ಅಲ್ಲಿ ಸುಮಾರು ೧೭೦ ಜನಕ್ಕೆ ಕೆಲಸ ಕೊಡದೆ ಏಕೆ ಅವರಿಗೆ ತೊಂದರೆ ಕೊಡುತ್ತಿದ್ದಾರೆ? ಅಲ್ಲಿನ ಆಯ್ಕೆ ಸಮಿತಿಯಲ್ಲಿರತಕ್ಕ ಸದಸ್ಯರು ಯಾರು? ಈ ಸದನದಲ್ಲಿ ಮಾನ್ಯ ಮಂತ್ರಿಗಳು ಏನು ಭರವಸೆ ಕೊಟ್ಟಿದ್ದರು ಅದನ್ನು ಆಯ್ಕೆ ಸಮಿತಿಯವರು ಉದ್ಯೋಗಿಗಳನ್ನು ಆಯ್ಕೆ ಮಾಡುವಾಗ ಏಕೆ ಈಡೇರಿಸಲಿಲ್ಲ? ಕನಿಷ್ಟಪಕ್ಷ ವಿದ್ಯಾರ್ಹತೆಯುಳ್ಳವರನ್ನಾದರೂ ಏಕೆ ಅಬ್ಸಾರ್ಬ್ ಮಾಡಿಕೊಳ್ಳಲಿಲ್ಲ. ನಾನೂ ಕೂಡ ಈ ಸದನದ ಪರವಾಗಿ ರಾಜ್ಯದ ಗ್ರಂಥಾಲಯ ಪ್ರಾಧಿಕಾರದಲ್ಲಿ ಸದಸ್ಯನಾಗಿದ್ದೇನೆ. ಸಭೆ ನಡೆಸಿ ಎಂದು ಗ್ರಂಥಾಲಯಕ್ಕೆ ಹಲವಾರು ಕಾಗದಗಳನ್ನು ಬರೆದಿದ್ದೇನೆ

†Indicate that remarks or speeches have not been revised by the member concerned.

ಆದರೂ ಕೂಡ ಇದುವರೆಗೆ ಒಂದು ಸಭೆಯನ್ನು ನಡೆಸಲಿಲ್ಲ. ಏತಕ್ಕೆ ಹೀಗಾಗುತ್ತಿದೆ ಎಂಬುದನ್ನು ಕೇಳಬೇಕಾಗಿದೆ. ಸಭೆ ಕರೆಯುವುದಕ್ಕೆ ಹಿಂದೇಮುಂದು ನೋಡುತ್ತಿದ್ದಾರೆ. ಏಕೆಂದರೆ, ಸದಸ್ಯರು ಬಂದರೆ ಪ್ರಶ್ನೆ ಕೇಳುತ್ತಾರೆಂದಿರಬಹುದು ಏನಾದರೂ ಅಪ್ಪಿತಪ್ಪಿ ಒಂದು ಸಭೆಯನ್ನು ಕರೆದರೆ, ಕರೆದ ಮರು ದಿನವೇ ಸಭೆಯನ್ನು ರದ್ದುಗೊಳಿಸಲಾಗಿದೆ ಎಂದು ತಿಳಿಸುತ್ತಾರೆ. ಅಲ್ಲಿ ಹಾಲಿ ದಿನಗೂಲಿ ಮೇಲೆ ಕೆಲಸ ಮಾಡುತ್ತಿದ್ದವರನ್ನೇ ಆಯ್ಕೆ ಮಾಡಿಕೊಳ್ಳಿದೆ ೨೪-೧-೧೯೮೦ ರಲ್ಲಿ ಪುನಃ ಹುದ್ದೆಗಳಿಗಾಗಿ ಜಾಹಿರಾತನ್ನು ಕೊಟ್ಟಿದ್ದಾರೆ. ಅದರ ಅವಶ್ಯಕತೆಯಾದರು ಏನು ಇತ್ತು? ಏತಕ್ಕೆ ಆ ರೀತಿ ಮಾಡಿದ್ದಾರೆ?

ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಪೇಟೆ).—ಇಲ್ಲಿ ವಿಷಯ ಸ್ವಲ್ಪ ಸಣ್ಣದಾಗುತ್ತ ಬಂದಿದೆ. ಆಶ್ವಾಸನೆ ಕೊಟ್ಟ ಪ್ರಕಾರ ಈಗಾಗಲೇ ೫೦೦ ಜನರಿಗೆ ಕೆಲಸ ಒದಗಿಸಲಾಗಿದೆ. ಉಳಿದವರಿಗೆ ಕೆಲಸ ಕೊಡುವ ಬಗ್ಗೆ ಮಾತ್ರ ಸಮ್ಮ ಮುಂದಿರುವ ಪ್ರಶ್ನೆ. ಅಲ್ಲಿ ಏನಾಗಿದೆ ಎಂದರೆ, ಹಂಗಾಮಿ ಕೆಲಸದಲ್ಲಿದ್ದವರನ್ನು ಬಿಟ್ಟು ಬೇರೆಯವರನ್ನು ಸೇರಿಸಿಕೊಂಡಿದ್ದಾರೆಂಬುದು ಒಂದು ಆಪಾದನೆ. ಕಳೆದ ೧೦ ವರ್ಷಗಳಿಂದ ಅಲ್ಲಿ ಕೆಲಸ ಮಾಡಿಕೊಂಡು ಬಂದಿದ್ದ ನೌಕರರು ಈಗ ವಯೋಮಿತಿಯ ನಿರ್ಬಂಧವನ್ನು ದಾಟಿದ್ದಾರೆ. ಹೀಗಾಗಿ ಈಗ ಅವರಿಗೆ ಬೇರೆ ಕಡೆ ಕೆಲಸ ಸಿಗದೆ ಇರುವುದರಿಂದ " ನಮ್ಮ ಜೀವನ ಕುಂಟಿತವಾಗುತ್ತಿದೆ " ಎಂಬುದು ಆ ನೌಕರರ ದೂರು. ಹೀಗೆ ಅಲ್ಲೇ ಹಂಗಾಮಿಯಾಗಿ ಕೆಲಸದಲ್ಲಿದ್ದಂತವರಿಗೆ ಕೆಲಸ ಕೊಡದೆ ಕೊಂದರೆ ಯಾಗಿದೆ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಇದನ್ನು ಪರಿಹಾರ ಮಾಡಿಕೊಡಬೇಕು. ಕಳೆದ ೧೦ ವರ್ಷಗಳಿಂದ ಕೆಲಸ ಮಾಡುತ್ತಿದ್ದವರನ್ನು ಮೊದಲು ಅಬ್ಸಾರ್ಬ್ ಮಾಡಿಕೊಳ್ಳಿ. ನಂತರ ಜಾಗ ಉಳಿದಿದ್ದರೆ ಬೇರೆಯವರಿಗೆ ಕೊಡಿ. ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಹಲವಾರು ಜನರು ಬಂದು ನಮ್ಮನ್ನು ಅಂಗಲಾಚಿ ಕೇಳಿಕೊಂಡಿದ್ದಾರೆ. ತಾವೇನು ಕಾನೂನಿಗೆ ವಿರುದ್ಧವಾಗಿ ಹೋಗಬೇಕಾಗಿಲ್ಲ. ಈಗಾಗಲೇ ಏನೋಂದು ನಿರ್ಣಯ ತೆಗೆದುಕೊಂಡು ಹಂಗಾಮಿ ಕೆಲಸಗಾರರಿಗೆ ಹುದ್ದೆಗಳನ್ನು ಕೊಡಲಾಗುವುದು ಎಂದು ಹೇಳಿದ್ದೀರಿ ಆದನ್ನು ಅನುಷ್ಠಾನಕ್ಕೆ ತನ್ನಿ, ಆಂಥವರು ಅಲ್ಲಿ ಸುಮಾರು ೧೨೦ ಜನರಿರಬಹುದು. ಒಟ್ಟಿನಲ್ಲಿ ಅಲ್ಲಿ ಎಷ್ಟು ಜನರಿದ್ದಾರೋ ಅವರಿಗೆಲ್ಲ ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ : ಮಾನ್ಯ ಅಧ್ಯಕ್ಷರೇ, ಗ್ರಂಥಾಲಯ ಇಲಾಖೆಯಲ್ಲಿ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ನೌಕರರ ಶೋಚನೀಯ ಜೀವನ ಪರಿಸ್ಥಿತಿಯನ್ನು ವಿವರವಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ನೌಕರರನ್ನು ಖಾಯಂಗೊಳಿಸುವುದು ಬಹಳ ಅಗತ್ಯ. ಈ ಸದನದ ಸದಸ್ಯರನೇಕರು ಇದರ ಬಗ್ಗೆ ಸರ್ಕಾರದ ಗಮನಸೆಳೆದಿದ್ದಾರೆ. ಅಲ್ಲದೆ, ನೌಕರರೂ ಸಹ ಈ ಸದನದ ಸದಸ್ಯರ ಗಮನ ಸೆಳೆದಿರುವುದಲ್ಲದೆ ಮಾನ್ಯ ಸಚಿವರುಗೂ ಸಹ ಅರಿಕೆ ಮಾಡಿಕೊಂಡಿದ್ದಾರೆ. ಆದುದರಿಂದ, ಅವರ ಮನವಿಯನ್ನು ಸಹಾನುಭೂತಿಯಿಂದ ಪರಿಶೀಲಿಸಿ, ಅವರನ್ನು ಖಾಯಂ ನೌಕರರ ನ್ನಾಗಿ ಮಾಡುವ ಬಗ್ಗೆ ಮಾನ್ಯ ಸಚಿವರು ಆಶ್ವಾಸನೆ ನೀಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಗ್ರಂಥಾಲಯ ಇಲಾಖೆಯ ನೌಕರರನ್ನು ಖಾಯಂಗೊಳಿಸುವ ವಿಚಾರವಾಗಿ ನಾನು ಮಾತನಾಡುತ್ತಿರುವುದು ಸಾವಿರದ ಒಂದನೆಯ ಬಾರಿ ಇರಬಹುದು! ನಾನು ಮೇಲ್ಮನೆಯ ಸದಸ್ಯನಾದಾಗಿನಿಂದಲೂ ಈ ವಿಚಾರವಾಗಿ ಪ್ರಸ್ತಾಪ ಮಾಡುತ್ತಾ ಬಂದಿದ್ದೇನೆ. ಆಷ್ಟೇ ಏಕೆ ಮುಖ್ಯ ಗ್ರಂಥಾಲಯಾಧಿಕಾರಿಗಳ ಮುಂದೆ ರಾಜ್ಯದ ನಾಲ್ಕು ಜನ ಮಂತ್ರಿಗಳೇ ಹೋರಟು ಹೋದರು. ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಈ ಲೋಕವನ್ನೇ ಬಿಟ್ಟುಬಿಟ್ಟರು ಮಾನ್ಯ ಬದರಿ ನಾರಾಯಣ್ ಅವರು ರಾಜಕೀಯದಿಂದಲೇ ನಿವೃತ್ತರಾದರು, ಮಾನ್ಯ ಸಂಬ್ಬಯ್ಯಶೆಟ್ಟರು ಈಗ ವಿರೋಧ ಪಕ್ಷಕ್ಕೆ ಬಂದಿದ್ದಾರೆ. ಗ್ರಂಥಾಲಯ ಇಲಾಖೆಯಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಸಭೆಯ ಗಮನಕ್ಕೆ ತರುತ್ತಿರುವಾಗ ಮಾನ್ಯ ಶೀರಾಳಿ ಚಂದ್ರಶೇಖರ್‌ರವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಸಿದ್ಧರಾಗಿರುತ್ತಿದ್ದರು. ಒಟ್ಟಿನಲ್ಲಿ ಹೇಳುವುದಾದರೆ, ನಿಮ್ಮದು ನಿರ್ವೀರ್ಯ ಸರ್ಕಾರ. ಆರು ವರ್ಷಗಳ ಕಾಲ ಮೇಲ್ಮನೆಯ ಸದಸ್ಯನಾಗಿ ಮತ್ತು ಕಳೆದ ಎರಡು ವರ್ಷಗಳಿಂದ ಈ ಮನೆಯ ಸದಸ್ಯನಾಗಿ ಗ್ರಂಥಾಲಯ ಮುಖ್ಯಾಧಿಕಾರಿ ಮಾಡುತ್ತಿರುವ ಅನ್ಯಾಯಗಳನ್ನು ಅಂಕಿ-ಸಂಖ್ಯೆಗಳ ಸಮೇತ ನಿಮ್ಮ ಮುಖದ ಮೇಲೆ ಎಸೆದರೂ ಕೂಡ ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಂಡು, ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಶೋಷಣೆ ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರವನ್ನು ನಿಲ್ಲಿಸವುದಕ್ಕೆ ಆಗುತ್ತಿಲ್ಲ. ಆದಕ್ಕೇ ನಾನು ಕಠೋರವಾಗಿ ಹೇಳಬೇಕಾಗಿದೆ, ನೀವು ನಿರ್ವೀರ್ಯರು ಎಂದು ಹಿಂದಿದ್ದವರೂ ಹೀಗೇ ಇದ್ದರು. ಎಲ್ಲರದ್ದೂ ಒಂದೇ ಮಟ್ಟ, ಯಾರಾದ್ದೂ ಹೆಚ್ಚು ಕಡಿಮೆ ಇಲ್ಲ.

ಶ್ರೀ ಕಡಿದಾಳ್ ದಿವಾಕರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮುಖದ ಮೇಲೆ ಎಸೆದರೂ ಎನ್ನುವ ಪದಗಳನ್ನು ಉಪಯೋಗಿಸಿದ್ದಾರೆ. ಅವರು ಆ ಪದಗಳನ್ನು ಉಪಯೋಗಿಸಬಹುದೆ?

ಶ್ರೀ ಮಳ್ಳೂರು ಆನಂದರಾವ್.—ನಿಮ್ಮ ವೀರ್ಯತೆ ಅಥವಾ ನಿರ್ವೀರ್ಯತೆಯ ಪ್ರದರ್ಶನ ಈಗಲೇ ಆಗಲಿ.

ಶ್ರೀ ಎಸ್. ವಿ. ನಾಯಕ್.—ಪುರುಷತ್ವ ಇರುವವರು ನೀವೊಬ್ಬರೇ ಅಲ್ಲ.

ಶ್ರೀ ಮಳ್ಳೂರು ಆನಂದರಾವ್.—ಅಲ್ಲಿ ನಡೆಯುತ್ತಿರುವ ಎಲ್ಲ ಭ್ರಷ್ಟಾಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಈಗ ಸಮಯವಿಲ್ಲ. ನಾನು ಹೇಳುತ್ತಿರುವುದು ಭ್ರಷ್ಟಾಚಾರದ ಒಂದು ತೃಣಾಕು ಮಾತ್ರ. ಮಾನ್ಯ ಸಚಿವರು ಶಾಂತಚಿತ್ತದಿಂದ ಇದನ್ನು ಅರ್ಥ ಮಾಡಿಕೊಳ್ಳಬೇಕು. ಗ್ರಂಥಾಲಯ ಇಲಾಖೆಯಲ್ಲಿ ದಿನಗೂಲಿ ಮೇಲೆ ನೌಕರರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಅವರಲ್ಲಿ ಕೆಲವರು ಕಳೆದ ಹನ್ನೊಂದು ವರ್ಷಗಳಿಂದಲೂ ಕೆಲವರು ಎಂಟು-ಹತ್ತು ವರ್ಷಗಳಿಂದಲೂ—ಹಂಗಾಮಿ ನೌಕರರಾಗಿಯೇ ಕೆಲಸ ಮಾಡುತ್ತಿದ್ದಾರೆ. ಅವರು ಪರಿಚಿತಿ ಇಲ್ಲದೆ ಇಲ್ಲ, ಅವರು ಖಾಯಂ ನೌಕರರಾಗಿ ನೇಮಕ ಗೊಳ್ಳಲು ಏನೇನು ಅರ್ಹತೆಗಳು ಬೇಕೋ ಅವೆಲ್ಲವನ್ನೂ ಗಳಿಸಿಕೊಂಡಿದ್ದಾರೆ. ಆದರೂ ಅವರನ್ನು ದಿನಗೂಲಿ ನೌಕರರೆಂದೇ ಇಟ್ಟುಕೊಂಡು ಬರಲಾಗುತ್ತಿದೆ ಏತ್ತಕ್ಕೆ? ಅವರನ್ನು ಸೂತ್ರದ ಬೊಂಬೆಗಳನ್ನಾಗಿ ಆಡಿಸುವುದಕ್ಕಾಗಿ ಹಾಗೇ ಇಟ್ಟಿದ್ದಾರೆ. ಆ ನೌಕರರನ್ನು ಖಾಯಂಗೊಳಿಸಬೇಕೆಂದು ನಾನು ಮೇಲ್ಮನೆಯಲ್ಲಿ ಪದೇ ಪದೇ ಪ್ರಸ್ತಾಪ ಮಾಡಿದಾಗ ಅಂದಿನ ವಿದ್ಯಾ ಸಚಿವರು ಉತ್ತರ ಕೊಟ್ಟಿದ್ದಾರೆ. ಅದರ ಪ್ರಕಾರ ದಿನಾಂಕ ೨೫-೬-೧೯೭೬ರಲ್ಲಿ ೨೦೭ ಹುದ್ದೆಗಳನ್ನು ಸರ್ಕಾರ ನಿರ್ಮಾಣ ಮಾಡಿದೆ. ೧೯೭೮ರಲ್ಲಿ ಮಾನ್ಯ ಸುಬ್ಬಯ್ಯ ಶೆಟ್ಟರು ಈ ಸಭೆಯಲ್ಲಿ ಆಶ್ವಾಸನೆ ಕೂಟ್ಟ ನಂತರ ಮತ್ತೆ ೩೭೩ ಹುದ್ದೆಗಳು ನಿರ್ಮಾಣವಾದವು. ಅಂದರೆ ಒಟ್ಟು ೬೮೦ ಹುದ್ದೆಗಳು ನಿರ್ಮಾಣವಾದವು. ಮತ್ತು ಆ ಹುದ್ದೆಗಳಿಗೆ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ನೌಕರರನ್ನು ನೇಮಕ ಮಾಡಿಕೊಳ್ಳಬೇಕೆಂದು ಸರ್ಕಾರ ಆಜ್ಞೆ ಮಾಡಿತು. ಆ ಪ್ರಕಾರ ದಿನಗೂಲಿ ಆಧಾರದ ಮೇಲೆ ಅಲ್ಲಿ ಕೆಲಸ ಮಾಡುತ್ತಿರುವವರು ಎಷ್ಟು ಜನ? ೬೦೩ ಜನ ಆದರೆ, ಅಲ್ಲಿರತಕ್ಕ ಅಧಿಕಾರಿ ತನ್ನ ಬುದ್ಧಿವಂತಿಕೆ ಮತ್ತು ಕೈವಾಡವನ್ನು ಉಪಯೋಗಿಸಿ ಹತ್ತು-ಹನ್ನೊಂದು ವರ್ಷಗಳಿಂದ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ನೌಕರರನ್ನು ನೇಮಕ ಮಾಡಿಕೊಳ್ಳದೆ, ಸರ್ಕಾರದ ಆಜ್ಞೆಗೆ ತದ್ವಿರುದ್ಧವಾಗಿ ಮತ್ತು ನೇಮಕಾತಿ ನಿಯಮಗಳಲ್ಲಿ ವಯೋಮಿತಿಗೆ ಸಂಬಂಧಿಸಿದಂತೆ ನಿಯಮವನ್ನು ತಿದ್ದುಪಡಿ ಮಾಡಲಾಗುವುದೆಂದು ಮಾನ್ಯ ಸಚಿವರು ಭರವಸೆ ಕೊಟ್ಟಿದ್ದರೂ ಸಹ, ಬೇರೆಯವರನ್ನು ನೇಮಕ ಮಾಡಿಕೊಂಡಿದ್ದಾರೆ. ಇದನ್ನು ಮಾನ್ಯ ಸಚಿವರು ಗಮನಿಸಬೇಕು. ಹತ್ತು-ಹನ್ನೊಂದು ವರ್ಷಗಳಿಂದ ದಿನಗೂಲಿ ಮೇಲೆ ಕೆಲಸ ಮಾಡುತ್ತಿದ್ದವರನ್ನು ನೇಮಕ ಮಾಡಿಕೊಳ್ಳಬೇಕೆಂದು ಸರ್ಕಾರ ಆದೇಶಕೊಟ್ಟ ಮೇಲೂ ನೇಮಕ ಮಾಡಿಕೊಳ್ಳದೆ ಇರುವುದಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕು. ಅವರನ್ನು ನೇಮಕ ಮಾಡಿಕೊಳ್ಳಲಿಲ್ಲವೆಂದರೆ ಇನ್ನಾರನ್ನು ನೇಮಕ ಮಾಡಿಕೊಂಡರು? ಯಾರಿಗೆ ಅರ್ಹತೆ ಇಲ್ಲವೋ, ಯಾರು ಬೋಟಾ ಅರ್ಹತಾ ಪತ್ರಗಳನ್ನು ತಂದುಕೊಟ್ಟಿರುವರೋ ಅವರನ್ನೆಲ್ಲ ನೇಮಕ ಮಾಡಿಕೊಂಡರು ಮಾನ್ಯ ಸಚಿವರು ಇದರ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಬೇಕು ಮತ್ತು ಮಾನ್ಯ ಸಭೆ ಕೂಡ ಇದರ ಬಗ್ಗೆ ವಿಚಾರ ಮಾಡಬೇಕು. ಯಾರು ಬೋಟಾ ಅರ್ಹತಾ ಪತ್ರಗಳನ್ನು ನೀಡಿ ಸರ್ಕಾರಿ ಮಂಜೂರು ಮಾಡಿರತಕ್ಕ ಹುದ್ದೆಗಳಿಗೆ ನೇಮಕ ಮಾಡಲ್ಪಟ್ಟಿದ್ದಾರೆ ಅವರೆಲ್ಲ ಸೇರಿ ಮುಖ್ಯ ಗ್ರಂಥಾಲಯಾಧಿಕಾರಿಯವರಿಗೆ ಒಂದು ಸಮಾರಂಭ ಏರ್ಪಾಡು ಮಾಡಿದ್ದರು. ಹಾಗೆಯೇ ಕೇಂದ್ರ ಗ್ರಂಥಾಲಯ ನೌಕರರ ಸಂಘವೊಂದು ನಿರ್ಮಾಣವಾಯಿತು. (ಭಿತ್ತಿಪತ್ರವೊಂದನ್ನು ತೋರಿಸುತ್ತಾ) ಇದೊಂದು ನಾಟಕ ಪ್ರದರ್ಶನದ ಭಿತ್ತಿಪತ್ರವಲ್ಲ. ಇದರ ಮಧ್ಯದಲ್ಲಿರುವ ದೊಡ್ಡ ಭಾವಚಿತ್ರಗಳು—ಶ್ರೀ ಡಿ. ಎನ್. ಬದರಿಯವರ ಶಾಸಕ ಲಕ್ಷ್ಮಣ್ ರವರ ಮತ್ತು ಶ್ರೀ ಶ್ರೀಕಂಠಯ್ಯನವರ ಚಿತ್ರಗಳು. ಇದೊಂದು ನಾಟಕ ಕಂಪನಿಯ ಜಾಹಿರಾತಲ್ಲ.

ಶ್ರೀ ಕೆ. ಎಲ್. ಮರಿಸ್ವಾಮಿ.—ಸನ್ಮಾನ ಯಾರಿಗೆ ಮಾಡಲಾಗಿದೆ?

ಶ್ರೀ ಮಳ್ಳೂರು ಆನಂದರಾವ್.—ಸಾರ್ವಜನಿಕ ಗ್ರಂಥಾಲಯದ ಮುಖ್ಯಾಧಿಕಾರಿಗಳಾದ ಸನ್ಮಾನ್ಯ ಶ್ರೀ ಡಿ. ಎನ್. ಬದರಿಯವರಿಗೆ, ಇದಕ್ಕಿಂತ ಬೇರೆ ಭ್ರಷ್ಟಾಚಾರವಿಲ್ಲ. ಹಂಗಾಮಿ ನೌಕರರಿಂದ ನಿರ್ಮಾಣವಾದ ಸಂಘವನ್ನು ತಳಿದು ನಾಶ ಮಾಡಿ ಬೋಟಾ ಅರ್ಹತಾ ಪತ್ರಗಳನ್ನು ತೋರಿಸಿ ಕೆಲಸ

ಪಡೆದುಕೊಂಡ ನೌಕರರ ಸಂಘವೊಂದನ್ನು ನಿರ್ಮಾಣ ಮಾಡಿ, ಇವರದೊಂದು ದೊಡ್ಡ ಭಾವಚಿತ್ರವನ್ನು ಭಿತ್ತಿಚಿತ್ರದಲ್ಲಿ ಹಾಕಿಸಿಕೊಂಡಿದ್ದಾರೆ. ಅಲ್ಲಿ ಲಕ್ಷಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆಯುತ್ತಿದೆ. ಭಿತ್ತಿಚಿತ್ರವನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ವಿದ್ಯಾ ಸಚಿವರಿಗೆ ಕಳುಹಿಸಿಕೊಡುತ್ತೇನೆ. (ಭಿತ್ತಿಚಿತ್ರವನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ವಿದ್ಯಾ ಸಚಿವರಿಗೆ ಕಳುಹಿಸಿಕೊಟ್ಟರು), ಇದರ ಬಗ್ಗೆ ಕೂಲಂಕಷವಾಗಿ ಮಾನ್ಯ ಸಚಿವರು ತನಿಖೆ ಮಾಡಬೇಕು ಮಾನ್ಯ ವಿದ್ಯಾ ಸಚಿವರಿಗೆ ತನಿಖೆ ಮಾಡಲಿಕ್ಕೆ ಶಕ್ತಿ ಇದ್ದರೆ ಮಾಡಲಿ, ಇಲ್ಲದಿದ್ದರೆ ಅವರಿಗೆ ಲೂಟಿ ಹೊಡೆಯುವುದಕ್ಕೆ ಬಿಟ್ಟು ಕೊಡಲಿ. ಎಷ್ಟು ಬಾರಿ ನಾವು ಈ ಕುರಿತು ಪ್ರಸ್ತಾಪ ಮಾಡುವುದು? ಆನಂದರಾವ್‌ಗೆ ಇನ್ನೇನೂ ಕೆಲಸವಿಲ್ಲ. ಇದೊಂದೇ ಇರುವುದು ಎಂದು ಯಾರಾದರೂ ಹೇಳಿದರೆ ನಮಗೇ ಅವಮಾನ. ಬೇಕಾದರೆ ನಮ್ಮನ್ನೆಲ್ಲ ಬುಗರಿಯಂತೆ ಆಡಿಸುತ್ತೇನೆ ಅಂತ ಅವರು ಹೇಳುತ್ತಾ ಬಂದಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಚಾವುಟಿ ಇಲ್ಲದೆ ಬುಗರಿ ಆಡಿಸುತ್ತಿದ್ದಾರೆ !

ಶ್ರೀ ಮಳ್ಳೂರು ಆನಂದರಾವ್.—ಮೊಳೆ ಇಲ್ಲದೆ ಬುಗರಿ ಆಡಿಸುತ್ತಿದ್ದಾರೆ ! ಇದರ ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪ ಮಾಡಿದರೆ ನನಗೆ ಅವಮಾನವಾಗುತ್ತದೆ. ಈ ಸದನಕ್ಕೆ ಅವಮಾನವಾಗುತ್ತದೆ. ದಿನಗೂಲಿ ನೌಕರರಿಗೆಂದು ಮಂಜೂರಾದ ಹುದ್ದೆಗಳಿಗೆ ಅವರನ್ನೇ ನೇಮಕ ಮಾಡಿಕೊಳ್ಳಬೇಕು. ಹಾಗೆ ಮಾಡಲಾಗುವುದೆಂದು ಈ ಸದನದಲ್ಲಿ ಸರ್ಕಾರ ಏನು ಆಸ್ವಾಸನೆ ಕೊಟ್ಟಿದೆ ಅದನ್ನು ಈಡೇರಿಸಬೇಕು. ಜೊತೆಗೆ ಗ್ರಂಥಾಲಯದ ಮುಖ್ಯಾಧಿಕಾರಿಯನ್ನು ಕೂಡಲೇ ಸಸ್ಪೆಂಡ್ ಮಾಡಿ, ಅವರ ಮೇಲೆ ಮಾಡಿರುವ ಭ್ರಷ್ಟಾಚಾರದ ಆರೋಪಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಹೇಳುತ್ತೇನೆ.

SRI G.B. SHANKAR RAO (Minister for Education).—Mr. Speaker Sir, 603 casual employees were working in the Department of State Libraries on daily wages. 602 posts in the various Cadres were sanctioned by Government with the object of regularising the services of of these casual employees as per Rules of Recruitment. Cadre and Recruitment Rules were so framed as to enable the Department to absorb these candidates. These posts were advertised and interviews were held by the Recruitment Committee constituted by Government. Freshers were also eligible to apply for the posts. The Committee interviewed these and other fresh candidates and out of 603 Casual employees only 521 were selected and as the remaining 82 persons did not secure high marks they were pushed down in the merit list and in their places the freshers were selected. The particulars of 82 Casual employees who have not been selected are given below ;

Sl No.	Designation	Qualified for appointment	Reserve	Shortage of experience	overaged	Not qualified	Total
1.	Librarian	3	—	3	—	—	6
2.	Library Asst.	16	18	—	1	—	35
3.	Accounts Clerks	6	—	—	—	—	6
4.	Attender/Helper	21	—	—	2	11	34
5.	Watchman	—	—	—	—	1	1
	Total...	46	18	3	3	12	82

Expect the three over-aged Casual employees and 12 un-qualified Casual employees, the remaining 67 eligible Casual Employees are proposed to be absorbed as and when vacancies occur. With the above object in view the following posts have been advertised in Karnataka Gazette dated 24-1-1980.

Librarians	...	6
Asst. Librarians	...	6
Typists	...	5
Attenders	...	7
Watchman	...	10

The Department is expanding day by day on account of the opening of the Branch Libraries by the District Central Libraries and City Central Libraries. With the expansion of the Department of Public Libraries, there will be more posts required to be filled up and the claim of the 67 eligible Casual Employees will be considered and they will be accommodated in due course.

I must say that in order to accommodate the casual employees Government had to amend the Recruitment Rules. After going through the process of recruitment, selections of521 persons were made; 15persons found to be over-aged and 123 persons found to be not possessing the required qualification. Now 62 posts are available. In 1979 candidates were called for interview and out of 603 candidates, we could admit 521. For 67 posts for which selection had to be made, in January 1980 applications have been called for along with others; age relaxation is also given upto 45 years. If these 67 persons are selected, there will be no casual worker left out. I may assure the House that those casual employees who fulfil the conditions under the amended cadre and recruitment rules will not be left out of selection. It is only in respect of 15 persons who are over-aged and cannot fulfill the required qualification, that we cannot accommodate them.

SMT. S. PRAMILA.—When they entered the service, they were not overaged.

SRI G.B. SHANKAR RAO.—The age-limit was raised upto 45 years under the amended rules. And such other persons who were above 45 years could not be accommodated and such persons are hardly 3 in number. 15 persons could not fulfil the conditions of the recruitment rules and other prescribed qualifications. I hope this will satisfy the hon. members.

Hon Member Sri P. Ramdev wanted to know the names of members of the Recruitment Committee. There was no regular Recruit-

ment Committee constituted by Government. Two Special Recuitment Committees were constituted to recruit the casual employees. The Special Recruitment Committee constituted for some posts of higher pay scale, the Additional Secretary to Government is the Chairman and few officers of the Government are members. For the lower category posts, the State Librarian is the Chairman and some officers as members. There are no non-official members in these two Special Committees. The Special Committees have interviewed candidates and they have selected 521 candidates. There are some posts remaining vacant.

Some hon. members wanted to know when these posts were sanctioned. Only 577 posts were sanctioned by government in the year 1978. Government could not sanction some posts because it was not brought to their notice. Government has not failed in its duty to sanction the posts required for the Library Department.

2-30 P.M.

The hon. member stated that the Library Committee has been called to meet even once. I have now asked the State Librarian to convene the meeting of the Committee immediately. Two or three hon. members referred to the enquiry cases. I have got a report before that enquiry was conducted and the Enquiry Officer has recommended exonerating the concerned officer because he found that the charges were not of a very serious nature as to warrant action by the Government. ಮತ್ತೆ ನಮ್ಮ ಆನಂದರಾಯರು ಮಂತ್ರಿಗಳಿಗೆ ನೀರು ಇಲ್ಲ ಎಂದು ಹೇಳಿದರು.

ಶ್ರೀ ಮಳ್ಳೂರು ಆನಂದರಾವ್.—ನೀರು ಅಲ್ಲ ಸ್ವಾಮಿ, ತಾಕತ್ತು ಇಲ್ಲ ಅಂತ ಹೇಳಿದೆ.

ಶ್ರೀ ಜಿ.ಬಿ. ಶಂಕರ್ ರಾವ್.-ನೀರು ಇಲ್ಲ ಅಂದರೆ ದಮ್ಮು ಇಲ್ಲ, ತಾಕತ್ತು ಇಲ್ಲ ಅಂತ ಅರ್ಥವೇ ? ನಾನು ತಪ್ಪಿಗೆ ಸಪ್ಪೆ ಮನುಷ್ಯನಾಗಿ ಕಾಣುತ್ತೇನೆಂದು ಕಾಣುತ್ತದೆ. ಗುರುತರವಾದಂಥ ಆಪಾದನೆಗಳು ಕಂಡುಬಂದರೆ ತಕ್ಕ ಕ್ರಮ ತೆಗೆದುಕೊಳ್ಳುವಂತ ಸಾಮರ್ಥ್ಯ ನನಗಿದೆ. ತಮ್ಮನ್ನು ನೋಡಿದಾಗಲೆಲ್ಲ ನನಗೆ ಚಾಮುಂಡಿ ಬೆಟ್ಟ ಜ್ಞಾಪಕಕ್ಕೆ ಬರುತ್ತದೆ. ನನ್ನನ್ನು ಅಷ್ಟು ಸುಲಭವಾಗಿ ಬೆದರಿಸುವುದಕ್ಕೆ ಸಾಧ್ಯವಿಲ್ಲ. ಕೆಲವು ಅಭ್ಯರ್ಥಿಗಳಿಗೆ ಸಂಬಂಧಪಟ್ಟಂತೆ ಹೈಕೋರ್ಟಿನಲ್ಲಿ ಕೇಸ್ ಇರುವುದರಿಂದ ಸುಮಾರು ೩೦-೩೨ ಜನ ಉಳಿದಿದ್ದಾರೆ. ಲೋಕಸೇವಾ ಆಯೋಗದಿಂದ ಕೆಲವರು ಆಯ್ಕೆಯಾಗಿದ್ದಾರೆ. ೬೦೩ ಜನರಲ್ಲಿ ಉಳಿದಿರತಕ್ಕವರನ್ನು ನೇಮಕ ಮಾಡುವ ಬಗ್ಗೆ ಈಗಾಗಲೇ ಆದೇಶ ಕೊಟ್ಟಿದ್ದೇನೆ ದಿನಗೂಲಿ ಮೇಲೆ ಕೆಲಸ ಮಾಡಿದಂಥ ಯಾರನ್ನು ಬಿಡುವುದಿಲ್ಲ. ಹಾಲಿ ಇರತಕ್ಕ ನೇಮಕಾತಿ ನಿಯಮಾವಳಿ ಪ್ರಕಾರ ತೆಗೆದುಕೊಳ್ಳುತ್ತೇನೆ. ಒಂದು ವರ್ಷ ಅನುಭವ ಇದ್ದರೆ ಸಾಕು ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ನಿಯಮಾವಳಿಯ ಕಕ್ಷೆಯಲ್ಲಿ ಬರದೇ ಇದ್ದರೆ ಮಾತ್ರ ಕಷ್ಟವಾಗುತ್ತದೆ. ೫೫ ವರ್ಷ ವಯಸ್ಸಾದವರನ್ನು ತೆಗೆದುಕೊಳ್ಳಿ ಎಂದರೆ ಸರ್ಕಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ೪೫ ವರ್ಷದವರೆಗೆ ವಯೋಮಿತಿಯನ್ನು ಏರಿಸಿದ ಉದ್ದೇಶವೇನೆಂದರೆ, ಸೇವೆ ಮಾಡಿದಂತಹ ಅಭ್ಯರ್ಥಿಗಳಿಗೆ ಅನುಕೂಲವಾಗಲಿ ಎಂದು. ಮತ್ತೆ ಕೆಲವು ಸದಸ್ಯರು ಹಂಗಾಮಿ ನೌಕರರ ಹೆಸರಿನಲ್ಲಿ ಬೇರೆಯವರು ತೂರಿಕೊಂಡು ಬಂದಿದ್ದಾರೆ ಎಂದು ಹೇಳಿದರು ಆ ರೀತಿ ಬಂದಿದ್ದರೆ ನಿರ್ದಾಕ್ಷಿಣ್ಯವಾಗಿ ಅಂಥವರನ್ನು ಹೊರಗೆ ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಮಾನ್ಯ ಸದಸ್ಯರುಗಳು ಹಾಗೂ ಈ ಸಭೆ ಇಷ್ಟಕ್ಕೆ ತೃಪ್ತಿಪಟ್ಟುಕೊಂಡಿದೆಯೆಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್. ಸ್ವಾಮಿ, ನಾನು ಮಾನ್ಯ ವಿದ್ಯಾ ಸಚಿವರಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ತಾವು ಒಹಳ ಶಾಂತಿಯಿಂದ ಈ ಸಮಸ್ಯೆಯ ಒನ್ನೆಲೆಯನ್ನು ಆರ್ಥ ಮಾಡಿಕೊಳ್ಳಬೇಕು. ಕಳೆದ ೧೦-೧೧ ವರ್ಷಗಳಿಂದ ದಿನಗೂಲಿ ಮೇಲೆ ಕೆಲಸ ಮಾಡಿದಂಥ ನೌಕರರನ್ನು ಇದುವರೆಗೂ ಖಾಯಂ ಮಾಡಿಲ್ಲ. ಅವರುಗಳು ನಮ್ಮನ್ನು ಖಾಯಂ ಮಾಡಿ ಎಂದು ವಿಧಾನ ಸೌಧದ ಮುಂದೆ ಸತ್ಯಾಗ್ರಹ ಹೂಡಿದ್ದರು ಅಂದು ವಿದ್ಯಾ ಮಂತ್ರಿಗಳು ಕೊಟ್ಟಂತಹ ಆಶ್ವಾಸನೆಯನ್ನು ತಮ್ಮ ಮೂಲಕ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಅವರುಗಳು ಮಂತ್ರಿಗಳ ಆ ಒಂದು ಆಶ್ವಾಸನೆಯ ಮೇರೆಗೆ ಮುಷ್ಕರವನ್ನು ಹಿಂತೆಗೆದುಕೊಂಡರು. ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ಅಮೆಂಡ್ ಮಾಡಿದ್ದು ದಿನಗೂಲಿ ಮೇಲೆ ಕೆಲಸ ಮಾಡಿದಂತಹ ನೌಕರರನ್ನು 'ತೆಗೆದುಕೊಳ್ಳುವ ದೃಷ್ಟಿಯಿಂದ. ಆದರೆ ಗ್ರಂಥಾಲಯದ ಮುಖ್ಯ ಅಧಿಕಾರಿಯವರು ಅದಕ್ಕನುಗುಣವಾಗಿ ಮಾಡದೆ ಅದಕ್ಕೆ ವಿರುದ್ಧವಾಗಿ ಮಾಡಿದ್ದಾರೆ. ಸರ್ಕಾರ ಕೊಟ್ಟಂತಹ ಆಶ್ವಾಸನೆಗೆ ವಿರುದ್ಧವಾಗಿ ನೇಮಕಾತಿಗಳು ನಡೆದಿರುವುದನ್ನು ತಾವು ದಯವಿಟ್ಟು ಮರೆಯಬಾರದು. ೬ ವರ್ಷಗಳಿಂದ ೧೦ ವರ್ಷಗಳವರೆಗೆ ಸೇವೆ ಮಾಡಿ ಅನುಭವ ಇರತಕ್ಕ ವರನ್ನು ಬಿಟ್ಟು ಬೇರೆಯವರನ್ನು ಹೊಸದಾಗಿ ನೇಮಕ ಮಾಡಿದ್ದಾರೆ. ತಮ್ಮ ಅಧಿಕಾರಿಗಳು ತಮ್ಮನ್ನು ಮಿಸ್‌ಲೀಡ್ ಮಾಡುತ್ತಿದ್ದಾರೆ, ತಾವು ಈ ವಿಚಾರವನ್ನು ಗಂಭೀರವಾಗಿ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈಗ ನಾನು ತಮ್ಮ ಕಡೆ ಕೊಟ್ಟಿರತಕ್ಕ ಪಟ್ಟಿ ಸಮಗ್ರವಾಗಿಲ್ಲ. ದಿನಗೂಲಿ ಕೆಲಸ ಮಾಡಿ ೩ ರಿಂದ ೧೧ ವರ್ಷಗಳ ಸೇವೆ ಮಾಡಿದ್ದು ನೇಮಕವಾಗದೇ ಇರತಕ್ಕವರನ್ನು ಕೂಡಲೇ ನೇಮಕ ಮಾಡುವುದಕ್ಕೆ ಆದೇಶ ಕೊಡುತ್ತೀರಾ?

ಶ್ರೀ ಟಿ. ಚೌಡಯ್ಯ. ಸ್ವಾಮಿ, ಈಗ ಹಂಗಾಮಿಯಾಗಿ ನೇಮಕ ಮಾಡಿದ್ದರಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಮೀಸಲಾತಿಯನ್ನು ಪಾಲನೆ ಮಾಡಿದ್ದಾರೆಯೆ? ಹಾಗೆ ಪಾಲನೆ ಮಾಡಿದ್ದರೆ ಹರಿಜನ ಗಿರಿಜನ ಅಭ್ಯರ್ಥಿಗಳು ಎಷ್ಟು ಜನ ಇದ್ದಾರೆ?

ಶ್ರೀ ಜಿ.ಬಿ. ಶಂಕರ್ ರಾವ್.—ಹರಿಜನ ಗಿರಿಜನ ಮೀಸಲಾತಿಯನ್ನು ನಿಯಮಾವಳಿ ಪ್ರಕಾರ ಪಾಲನೆ ಮಾಡಬೇಕು. ಸದ್ಯಕ್ಕೆ ವಿವರ ಇಲ್ಲ, ಒದಗಿಸಿ ಕೊಡುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ತಮ್ಮ ಅಧಿಕಾರಿಗಳು ಎಲ್ಲರಿಗೂ ಟೋಪಿ ಹಾಕಿದ್ದಾರೆ ತಮಗೂ ಹಾಕಿದ್ದಾರೆ

ಶ್ರೀ ಜಿ.ಬಿ. ಶಂಕರ್ ರಾವ್. —ಅರ್ಹತೆ ಆಧಾರದ ಮೇಲೆ ಹರಿಜನ ಗಿರಿಜನರಿಗೆ ಕೊಡಬೇಕಾದ ಮೀಸಲಾತಿಯನ್ನು ಕೊಡಲೇಬೇಕು. ಈ ವಿಚಾರವನ್ನು ನಾನು ಪರಿಶೀಲನೆ ಮಾಡುತ್ತೇನೆ ಮಾನ್ಯ ಸದಸ್ಯರುಗಳು ಇಷ್ಟರಮಟ್ಟಿಗೆ ತೃಪ್ತಿಪಟ್ಟುಕೊಳ್ಳಬಹುದು. ೬೦೩ ಜನರನ್ನು ಮಾತ್ರ ಸಂದರ್ಶನಕ್ಕೆ ಕರೆಯುವುದಕ್ಕಾಗುವುದಿಲ್ಲ. ಆವರೊಂದಿಗೆ ಬೇರೆಯವರನ್ನು ಸಂದರ್ಶನಕ್ಕೆ ಕರೆಯಬೇಕಾಗುತ್ತದೆ. ಒನ್ನೆ ೨೪ನೇ ತಾರೀಖು ಬೇರೆ ಸಂದರ್ಶನ ಕರೆಯಲಾಗಿದೆ. ಉಳಿದಿರತಕ್ಕ ಎಲ್ಲರನ್ನೂ ತೆಗೆದುಕೊಳ್ಳಲಾಗುವುದೆಂದು ಈ ಸಭೆಗೆ ಆಶ್ವಾಸನೆ ಕೊಡುತ್ತೇನೆ.

MR. SPEAKER.—What is the total number of Scheduled Caste and Scheduled Tribe candidates ?

SRI G. B. SHANKAR RAO.—Those details are not with me now if the hon members want them, I shall furnish.

SRI P. RAMDEV.—Please get them.

SRI G. B. SHANKAR RAO.—I prepared to furnish them. Please allow me time.

SRI C. M. ARUMUGHAM.—Sir, these appointments were made at the sweet will and discretion of the State Librarian. The Hon. Minister or his predecessor has not ascertained whether the State Librarian while making such temporary appointments has made reservation for the scheduled Castes and Scheduled Tribes. When discretion

is given to the Heads of Departments, it happpens that they appoint their own men and the men whom they like. In temporary appointments if there are Scheduled Caste and Scheduled Tribe candidates, Government allows the Heads of Departments to make them permanent. Suppose there are 600 temporary candidates which they are going to make permanent, if there are no Scheduled Caste or Scheduled Tribe candidates, 18% of 600 should be recruited along with others. Will he give an assurance to that effect on the floor of the House ? If this information is not before the Minister now, let him give it to the House tomorrow Sir you put a relevant question as to how many Scheduled Caste/Scheduled Tribe candidates are there out of this number for which the Hon. Minister does not have the information. I therefore submit that let him collect it and inform the House tomorrow as to the total number of temporary appointments made by the State Librarian how many of them have been made permanent and out of them how many are Scheduled Caste and Scheduled Tribe candidates.

SRI G. B. SHANKAR RAO.—I shall give such of the information as can be supplied to the House. This pertains to casual employees and if there are no casual employees belonging to Scheduled Castes or Scheduled Tribes, the Committee cannot help it.

SRI C. M. ARUMUGHAM —When discretion is given to the Heads of Departments, they do not follow the reservation. They make appointments as they like. I would like to know when these temporary appointments were made, whether they have appointed any Scheduled Caste or Scheduled Tribe candidates if they have not appointed them and if such candidates are not there in the list, whether the Selection Committee could not have selected such candidates. Because it is the duty of the Government to direct the Heads of Departments to give 18% reservation for these candidates.

SRI B. B. SAYANAK.—If this rule regarding 18% reservation is there since 1968, has he followed it ? I find that most of the persons who are taken are ladies and they are not confirmed.

ಶ್ರೀ ಬಿ. ವಿ. ಕಕ್ಕಿಲಾಯ.—ಅಧ್ಯಕ್ಷರೇ, ಮುಖ್ಯ ಲೈಬ್ರರಿಯನ್ ಯಾರು ಇದ್ದಾರೆ ಅವರು ಕಳೆದ ಹತ್ತಾರು ವರ್ಷಗಳಿಂದಲೂ ಅದೇ ಸ್ಥಾನದಲ್ಲಿ ಇದ್ದಾರೆ. ಈಗ ಏನಾಗಿದೆ ಅಂದರೆ ಅವರಿಗೆ ಇಷ್ಟ ಬಂದವರನ್ನು ಅಲ್ಲಿ ಕೆಲಸಕ್ಕೆ ನೇಮಿಸಿ ಕೊಂಡಿದ್ದಾರೆ. ಆದುದರಿಂದ, ಇದರ ಬಗ್ಗೆ ಪೂರ್ತಿ ಪರಿಶೀಲನೆ ಮಾಡಿ ಟೆಂಪರರಿಯಾಗಿ ಯಾರು ಅಲ್ಲಿ ಬಹಳ ಕಾಲದಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ ಅವರನ್ನು ಖಾಯಂಗೊಳಿಸಬೇಕಾದುದು ಒಂದು. ಇನ್ನು ಎರಡನೆಯದಾಗಿ ಸರ್ಕಾರದ ನಿಯಮಕ್ಕೆ ವಿರೋಧವಾಗಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಕೊಡಬೇಕಾದಂತಹ ವಿಂಸಲಾತಿಯನ್ನು ಕೊಡದೆ ಅವರ ಇಷ್ಟಾನುಸಾರ ಯಾರು ಯಾರನ್ನೋ ತೆಗೆದುಕೊಂಡಿದ್ದಾರೆ, ಆದುದರಿಂದ ಅವರಿಗೆ ಕೊಡಬೇಕಾದಂತಹ ವಿಂಸಲಾತಿಯನ್ನು ಕೊಡುವುದು. ಇನ್ನು ಮೂರನೆಯದಾಗಿ, ಇದರ ಬಗ್ಗೆ ಆ ಅಧಿಕಾರಿ ಅಕ್ರಮವಾಗಿ ಏನು ವರ್ತನೆ ಮಾಡಿಕೊಂಡು ಬಂದಿದ್ದಾನೆ ಅವನ ಮೇಲೆ ಯಾವ ತರಹ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಈ ಸಭೆಗೆ ತಿಳಿಸಬೇಕು.

ಶ್ರೀ ಟಿ. ಚೌಡಯ್ಯ.—ಅಧ್ಯಕ್ಷರೇ ಕೆಲವು ಅಧಿಕಾರಿಗಳು ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ರಿಸರ್ವೇಷನ್ ಕೊಡಬಾರದು ಎಂದು ಬೇರೆಯವರನ್ನು ಅಪಾಯಿಂಟ್ ಮೆಂಟ್ ಮಾಡುವುದು ಇದೆ. ಆಲ್ಲಿ ನಿಜವಾಗಿಯೂ ರೂಲ್ಸ್ ಫಾಲೋ ಮಾಡಿದರೆ ಆದರಲ್ಲಿ ೧೮ ಪರ್‌ಸೆಂಟ್ ರಿಸರ್‌ವೇಷನ್ ಮಾಡಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಕೊಡಲಿಕ್ಕೆ ಬರುತ್ತದೆ ಮತ್ತು ಅದೇ ರೀತಿ ಕೊಡಬೇಕಾಗುತ್ತದೆ. ಈಗ ೬೦೦ ಜನ ಅಂದರೆ ಸಂಪಾರು ೧೦೮ ಜನ ಹರಿಜನ ಗಿರಿಜನರಿಗೆ ಕೆಲಸ ಕೊಡಬೇಕು. ಇಲ್ಲದಿದ್ದರೆ ಸುಮಾರು ಆರನೇ ಬಂದು ಭಾಗ ದಷ್ಟು ಜನರಿಗೆ ಧಕ್ಕೆಯಾಗುತ್ತದೆ. ಆದುದರಿಂದ ಇದನ್ನು ಪರಿಶೀಲನೆ ಮಾಡಿ ಸರಿಪಡಿಸಬೇಕೆಂದು ತಿಳಿಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ.—ಅಧ್ಯಕ್ಷರೇ ಆಲ್ಲಿ ಈಗ ನೇಮಕ ಮಾಡಿರತಕ್ಕದ್ದರಲ್ಲಿ ಎಷ್ಟು ಜನ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರು ಇದ್ದಾರೆಂದು ಅನೇಕರು ಮಾನ್ಯ ಮಂತ್ರಿ ಗಳನ್ನು ಕೇಳಿದ್ದಾರೆ. ಆ ಬಗ್ಗೆ ಮಾನ್ಯ ಮಂತ್ರಿಗಳು ನಾಳೆ ಉತ್ತರ ಹೇಳುತ್ತೇನೆಂದು ಹೇಳಿದ್ದಾರೆ. ಆದುದರಿಂದ ಈ ವಿಷಯವನ್ನು ನಾಳೆಗೆ ಮುಂದೂಡಿದರೆ ನಾಳೆ ಮಾಹಿತಿ ಒದಗಿಸುತ್ತಾರೆ. ಆನಂತರ ನಾವು ವಿಚಾರ ಕೇಳಬಹುದು.

MR. SPEAKER.—Place this information before the House.

ಶ್ರೀ ಆರ್. ಎಸ್. ಪಾಟೀಲ್.—ಅಧ್ಯಕ್ಷರೇ. ಮಾನ್ಯ ಸದಸ್ಯರಾದ ಆರ್ಮುಗಂ ಅವರಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ೧೮ ಪರ್‌ಸೆಂಟ್ ತುಂಬುವಾಗ ಹರಿಜನ ಗಿರಿಜನರು ಇಲ್ಲವೇ ಹೋದರೆ ಕಮಿಟಿ ಕಾಂಟ್ ಹೆಲ್ಪ್ ಇಟ್ ಅಂತ ಹೇಳಿದ್ದಾರೆ ಅದು ಸರಿಯಲ್ಲ, ೧೮ ಪರ್‌ಸೆಂಟ್ ತುಂಬಲಿಕ್ಕೆ ಹರಿಜನ ಗಿರಿಜನರು ಇಲ್ಲದೇ ಹೋದರೆ ಆ ಹುದ್ದೆ ಗಳನ್ನು ಹಾಗೆ ಖಾಲಿ ಇಟ್ಟು ಮುಂದಿನ ಸಾರಿ ಪುನಃ ಆರ್ಜಿಗಳನ್ನು ಕರೆದು ತುಂಬಬೇಕು

ಶ್ರೀ ಪಿ. ರಾಂದೇವ್.—ಸ್ವಾಮಿ, ಮಾನ್ಯ ಸಚಿವರು ಉತ್ತರ ಕೊಡುತ್ತಾ ೨ ಸಮಿತಿಗಳನ್ನು ನೇಮಕ ಮಾಡಿರುವುದಾಗಿ ತಿಳಿಸಿ ಅದರಲ್ಲಿ ಒಂದು ಜಾಯಿಂಟ್ ಸೆಕ್ರೆಟರಿಯವರನ್ನೊಳಗೊಂಡದ್ದು ಇನ್ನೊಂದು ಸ್ಟೇಟ್ ಲೈಬ್ರರಿಯನ್ ಒಳಗೊಂಡದ್ದು ಎಂದು ಹೇಳಿದ್ದಾರೆ. ಸ್ಟೇಟ್ ಲೈಬ್ರರಿಯನ್ ಮೇಲೆ ಇಷ್ಟೊಂದು ಆಪಾದನೆಗಳಿದ್ದರೂ ಅಭ್ಯರ್ಥಿಗಳನ್ನು ಅಪಾಯಿಂಟ್ ಮಾಡುವ ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ, ಇದರಿಂದಾಗಿ ಇಷ್ಟೊಂದು ಗೊಂದಲಕ್ಕೆ ಕಾರಣವಾಗಿದೆ.

ಶ್ರೀ ಸಿ. ಎ. ಚಂದ್ರೇಗೌಡ —ಸ್ವಾಮಿ, ಮಳ್ಳೂರು ಆನಂದರಾವ್‌ರವರು ಮಾತನಾಡುವಾಗ "ಮಂತ್ರಿಗಳ ಮುಖದ ಮೇಲೆ ಪತ್ರವನ್ನು ಎಸೆದುಬಂದೆ" ಎಂದು ಹೇಳಿದ್ದಾರೆ. ಅವರು ಯಾವ ಅಧಿ ಕಾರಿಯ ಮುಖದ ಮೇಲೆ, ಅಥವಾ ಯಾವ ಮಂತ್ರಿಯ ಮುಖದ ಮೇಲೆ ಪತ್ರ ಎಸೆದು ಬಂದಿದ್ದಾ ರೆಂಬುದನ್ನು ಹೇಳಬೇಕು. ಏಕೆಂದರೆ ಅವರು ಅಧಿಕಾರಿಗಳ ಹತ್ತಿರ ಹೋದರೆ ಕೈಯಲ್ಲಿ ಕಾಗದ ಹಿಡಿದು ಕೈ ಮುಗಿದುಕೊಂಡು ನಿಂತಿರುತ್ತಾರೆ. ಆದರೆ ಇಲ್ಲಿ ಬಂದು ನಾನು ಅವರ ಮುಖದ ಮೇಲೆ ಕಾಗದ ಎಸೆದು ಬಂದೆ, ಇವರ ಮುಖದ ಮೇಲೆ ಕಾಗದ ಎಸೆದು ಬಂದೆ ಎಂದು ಹೇಳುತ್ತಾರೆ. ಈ ಸದನದಲ್ಲಿ ಮಾತನಾಡುವುದಕ್ಕೆ ಅಧಿಕಾರ ಇದೆ ಎಂದು ಈ ರೀತಿ ಮಾತನಾಡುವುದು ಸರಿಯಲ್ಲ.

MR. SPEAKER.—I am not afraid of anybody. I obey the rules and procedure. The Hon Member will please withdraw what he has said. When I have said that I will examine, the Hon Member has to wait. You please resume your seat.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಚಂದ್ರೇಗೌಡರು ಏನು ಮಾತುಗಳನ್ನಾಡಿದ್ದಾರೆ, ಅದು ಈ ಸಭೆಯ ಗೌರವಕ್ಕೆ ಹಾಗೂ ಸಭೆಯ ಅಧ್ಯಕ್ಷರ ಗೌರವಕ್ಕೆ ಘನತೆಗೆ ಧಕ್ಕೆ ತಂದಂತಾಗಿದೆ. ತಾವು ಈಗ ಅಪ್ಪಣೆ ಕೊಡಿಸಿರುವಂತೆ ಮಾನ್ಯ ಸದಸ್ಯರು ತಾವು ಆಡಿದ ಮಾತುಗಳನ್ನು ವಾಪಸ್ಸು ತೆಗೆದುಕೊಂಡು ಈ ಸಭೆಯ ಘನತೆ, ಗೌರವಗಳನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಅನೇಕ ಜನ ಮಾನ್ಯ ಸದಸ್ಯರುಗಳು ಒಟ್ಟಿಗೇ ಮಾತನಾಡಲು ಪ್ರಾರಂಭಿಸಿದರು)

(ಗೊಂದಲ)

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ನನ್ನ ವಿಚಾರದಲ್ಲಿ ಪ್ರಸ್ತಾಪ ಮಾಡಿರುವುದರಿಂದ ನಾನು ಒಂದು ಮಾತನ್ನು ಇಲ್ಲಿ ಹೇಳಲೇ ಬೇಕಾಗಿದೆ, ಅವರು ಮಾತ ನಾಡುವಾಗ ನನ್ನನ್ನು ಕುರಿತು "ಅವರು ಅಧಿಕಾರಿಗಳ ಹತ್ತಿರ ಹೋದರೆ ಕೈಯಲ್ಲಿ ಕಾಗದ ಹಿಡಿದು ಕೊಂಡು ನಿಂತಿರುತ್ತಾರೆ, ಇಲ್ಲಿ ಬಂದು ತಪ್ಪಿಗೆ ಮಾತನಾಡುವುದಕ್ಕೆ ಅಧಿಕಾರವಿದೆಯೆಂದು ಈ ರೀತಿ ಮಾತನಾಡುತ್ತಾರೆ" ಎಂದು ಏನು ಮಾತುಗಳನ್ನು ಉಪಯೋಗಿಸಿದ್ದಾರೆ, ಆ ಮಾತುಗಳನ್ನು ಸದನದ ಕಾರ್ಯಕಲಾಪದ ಕಡತದಿಂದ ತೆಗೆಸಿಹಾಕಬೇಕು.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ ನಾನು ಈ ವಿಚಾರವನ್ನು ಬಿಟ್ಟು ಬೇರೆ ಇನ್ನೊಂದು ಪ್ರಶ್ನೆಗೆ ಉತ್ತರವನ್ನು ಕೊಡಬೇಕಾಗಿದೆ.

SRI PRABHAKAR TELKAR.—Sir. in this calling attention notice this point whether 18% of the seats.

ಅಧ್ಯಕ್ಷರು.—ವಿಷಯ ಏನು ಎಂಬುದನ್ನು ತಾವು ನೇರವಾಗಿ ಹೇಳಿದರೆ ಸಾಕು.

SRI PRABHAKAR TELKAR.—Sir. there is a Government Order for reservation of backward classes also. So, that may also be taken into consideration by the Hon. Minister while submitting a report to this August House. Let him think and give a reply regarding this reservation also.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರಾದ ಶ್ರೀಮಾನ್ ಆರ್. ಎಸ್. ಪಾಟೀಲ್‌ರವರೆ ಮಾತನಾಡುತ್ತಾ, ಆಯ್ಕೆ ಸಮಿತಿಯವರು ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಪರಿಶಿಷ್ಟ ಜಾತಿಯವರನ್ನು ಸಾಕಷ್ಟು ಸಂಖ್ಯೆಯಲ್ಲಿ ನೇಮಕ ಮಾಡಿಕೊಂಡಿಲ್ಲವೆಂದು ಹೇಳಿರುವ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಸಮಸ್ಯೆ ದಿನಗೂಲಿಯ ಕೆಲಸಕ್ಕೆ ಸಂಬಂಧಪಟ್ಟಿದ್ದು. ಅಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರು ಸಿಕ್ಕದಿದ್ದರೆ ಮಾನ್ಯ ಸದಸ್ಯರ ಅಭಿಪ್ರಾಯದಂತೆ ಮುಂದೆ ಆ ಸ್ಥಾನಗಳನ್ನು ಭರ್ತಿ ಮಾಡುವಾಗ ಮೊದಲು ಪ್ರತಿಶತ ೧೮ ಸ್ಥಾನಗಳನ್ನು ಪರಿಶಿಷ್ಟ ಜಾತಿಯವರಿಗೆ ಏನು ಭರ್ತಿಮಾಡಿಕೊಳ್ಳಬೇಕು, ಅದನ್ನು ಮಾಡಿಕೊಂಡು ಅನಂತರ ಉಳಿದ ಜಾಗಗಳಿಗೆ ಬೇರೆಯವರನ್ನು ಭರ್ತಿಮಾಡಿಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಕಕ್ಕಿಲಾಯರವರು ಮಾತನಾಡುತ್ತಾ ಸ್ಟೇಟ್ ಲೈಬ್ರರಿಯಲ್ಲಿ ಅನೇಕ ಜನ ಬಹಳ ವರ್ಷಗಳಿಂದಲೂ ಅಲ್ಲೇ ಇದ್ದಾರೆ, ಮೊದಲು ಅವರನ್ನು ಅಲ್ಲಿಂದ ಬದಲಾಯಿಸಬೇಕೆಂದು ಹೇಳಿದ್ದಾರೆ. If he is there it is because of his seniority and qualification and none is there to replace him. he cannot be transferred. In view of the rules of recruitment, the Government is not in a position to help him in this regard. So far as reservations are concerned, the posts which are meant for Scheduled Castes and Scheduled Tribes i.e , 18% will be filled up. If they are not being fulfilled according to the constitutional provision as I have already told the House, in future these vacancies will be filled.

SRI C. M. ARUMUGHAM.—What future vacancies ?

(Interruptions)

ಶ್ರೀ ಬಿ ವಿ. ಕಕ್ಕಿಲಾಯ.—ಅವರು ಸೀನಿಯರ್ ಪೋಸ್ಟ್ ಇರಬಹುದು, ಆದರೆ ಇಂಥ ಆಕ್ರಮ ಗಳನ್ನು ಅವರು ಮಾಡಿರುವುದರಿಂದ ಅವರ ಮೇಲೆ ಬಿಗಿಯಾದ ಕ್ರಮ ತೆಗೆದುಕೆ ಳ್ಳುವುದಕೆ ಬರುವು ದಿಲ್ಲವೇ ?

SRI B. B. SAYANAKA.—That Librarian must be removed immediately.

MR. SPEAKER. —The Hon Minister may please collect the information and make a statement tomorrow.

SRI G. B. SHANKAR RAO.—I request that I may kindly be given one day more. Day after tomorrow I will reply.

MR. SPEAKER —All right.

SRI PRABHAKAR TELKAR.—The Hon. Minister may also take into consideration the reservations for backward classes and minorities.

(*Interruptions*)

SRI M. C. NANAIAH.—As rightly pointed out by Sri Kakkilaya, here is an officer who has been there for more than 8 to 10 years even though there are so many complaints against him. The hon. Minister has said that officer is there on account of his seniority and qualification. In that case, I want to know whether the Government is helpless in respect of an officer against whom there are so many complaints? Is it the policy of the Government that on account of seniority an officer against whom so many complaints are there, he cannot be shifted from that post?

3-00 P.M.

I am very certain that even the Hon. Chief Minister will not agree with the statement made by the Hon. Education Minister.

ಶ್ರೀ ಜಿ. ಬಿ. ಶಂಕರ ರಾವ್. ನಿನ್ನೆ ದಿವಸ ಈ ವಿಷಯ ಸದನದಲ್ಲಿ ಪ್ರಸ್ತಾಪವಾಯಿತು. ಅವರು ತಾವಾಗಿಯೇ ಕಲ್ಪನೆ ಮಾಡಿಕೊಂಡು ಅವರ ಬಗ್ಗೆ ಆಪಾದನೆಗಳಿವೆ ಎಂದೂ ಆದಕಾರಣ ಅವರನ್ನು ತೆಗೆಯ ಬೇಕೆಂದು ಹೇಳಿದರು. ಆಪಾದನೆಗಳ ಬಗ್ಗೆ ನಮಗೇನು ರೆಕಮೆಂಡೇಶನ್ಸ್ ಬಂದಿಲ್ಲ ಆದ್ದರಿಂದ ತಾವು ಹೇಳುತ್ತೀರೆಂದು ಅವರನ್ನು ಕಿತ್ತುಹಾಕಬೇಕೆಂದರೆ ಅದು ಅಸಾಧ್ಯವಾದ ಕೆಲಸ.

SRI M. C. NANAIAH.—Instead of the Hon. Minister saying that he is there by seniority and all that he could have said that he will enquire into the matter.

ಶ್ರೀ ಜಿ. ಬಿ. ಶಂಕರರಾವ್.—ನಾನು ಈ ಸದನದಲ್ಲಿ ೨೦-೨೩ ವರ್ಷಗಳಿಂದಲೂ ಸದಸ್ಯನಾಗಿದ್ದೇನೆ. ಮತ್ತು ನಾನು ಯಾವ ಸಂದರ್ಭದಲ್ಲಿಯೂ ಉತ್ತರ ಕೊಡುವಾಗ್ಗೆ ನೇರವಾಗಿಯೇ ಉತ್ತರವನ್ನು ಕೊಟ್ಟಿರುತ್ತೇನೆ.

SRI C. M. ARMUGHAM.—This is with reference to article published is the Indian Express dated 19th April, 1977 for which my friend who in sitting there *i.e.* Sri Yahya, the then Minister for University Education made statement on the Floor of the House *i.e.*, the allegation mentioned in those articles were subject-matter of similar petition received during last year.

Mr. Speaker, Sir, these petitions were referred to the Department of Personnel Administration the then G.A.D. for investigation. As the allegations were against Sri N. B. Bageri, Head of the Department

of Libraries, it is understood from the D.P.A.R. that these allegations were referred to the Vigilance Commission some time in July, 1976 for investigation. It appears the report of the Vigilance Commission has not yet been received by the Department. I would like to know what has happened to this report. Whether the Vigilance Commission has already completed its enquiry and given the report? If so, kindly place the report on the table of the House I think this was referred to COD also. Anyway, I request the hon. Minister to give this information also while replying day after tomorrow.

ಶ್ರೀ ಜಿ. ಬಿ. ಶಂಕರ ರಾವ್.—ಮಾನ್ಯ ಸದಸ್ಯರ ಭಾವನೆಯಂತೆ ಅವರ ಸಮಸ್ಯೆಗಳು ಏನೇನು ಇವೆ ಅವನ್ನೆಲ್ಲ ತಿಳಿದುಕೊಂಡು ಉತ್ತರ ಕೊಡುವಾಗ ಸಮರ್ಥ ರೀತಿಯಲ್ಲಿ ಉತ್ತರ ಕೊಡುತ್ತೇನೆಂದು ಹೇಳುತ್ತೇನೆ.

Death of Sadhu in Police Custody

†SRI A.LAKSHMI SAGAR (Chickpet).—I seek your kind indulgence in the matter which was not conclusively dealt with *viz.*, the notice of Adjournment Motion I gave some time ago.

MR. SPEAKER.—There is no adjournment motion before me. Even priliminary hearing was over and I have already withheld my consent. That matter has already been concluded. What is that you want now? There is no adjournment motion pending before me.

SRI A. LAKSHMI SAGAR:—Anyhow the discussion on the statements of the Chief Minister on two occasions in respect of this matter has taken a new turn and a serious turn. The Statement has not clarified our grave doubts about the death of Sadhu in the police custody, which is an admitted fact.

I made a request yesterday that a copy of the post-mortem report should have been made available to us in order to enable us to know the details of the wounds which were found on the body of the Sadhu. This post-mortem report, among other things, will give a description of the number of wounds on the body of the dead person and the places of the body over which those wounds were found and the nature of the wounds and internal injuries, if any. All these details should have been made available to us about which I made a request yesterday. All that has now been done is, a copy of the inquest report of the SDM is made available to us only after the Session began,

The matter is not still over. There are several factors but I will confine myself to some of the more important factors in respect of this sordid episode.